- -   R.A. No. 29/2022

ಪಿ.ಡಬ್ಲ್ಯೂ :1

ದಿನಾಂಕ : 04-03-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ವೆಂಕಟಯ್ಯ ತಿಮ್ಮಯ್ಯ , ಚಿಕ್ಕ ತಿಮ್ಮಯ್ಯ , ಮೂಡಲಯ್ಯ ಹಾಗೂ ದೊಡ್ಡ ಗೋವಿಂದಯ್ಯ ಎಂಬ ನಾಲ್ಕು ಜನರ ಮಕ್ಕಳು ಎಂದರೆ ಸರಿ . ನನ್ನ ತಂದೆ ಮತ್ತು ಅವರ ಸಹೋದರರು ದಿಃ15-03-1995 ರಂದು ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆ ಎಂದರೆ ಸರಿ .ಸದರಿ ವಿಭಾಗದಲ್ಲಿ ನನ್ನ ತಂದೆಯ ಅಣ್ಣ ಚಿಕ್ಕ ತಿಮ್ಮಯ್ಯ ರವರ ಭಾಗಕ್ಕೆ ಬಂದ ಸ್ವತ್ತಿನ ಸಂಬಂಧ ದಾವೆ ಸಲ್ಲಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ಚಿಕ್ಕತಿಮ್ಮಯ್ಯ ರವರ ಭಾಗಕ್ಕೆ ಬಂದಿರುವ ಸ್ವತ್ತುಗಳನ್ನು ಅವರ ಮಕ್ಕಳು ವಿಭಾಗಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಓ ಎಸ್ ನಂ . 379/2015 ರ ದಾವೆಯನ್ನು , ಚಿಕ್ಕ ತಿಮ್ಮಯ್ಯ ರವರ ಮಕ್ಕಳು ಅವರ ತಂದೆಯ ಭಾಗಕ್ಕೆ ಬಂದಿದ್ದ ಸ್ವತ್ತಿನ ಸಂಬಂಧ ವಿಭಾಗಕ್ಕಾಗಿ ಸಲ್ಲಿಸಿದ್ದರು ಎಂದರೆ ನಮ್ಮ ಸ್ವತ್ತಿಗೆ ಸಂಬಂಧಿಸಿ ಸಲ್ಲಿಸಿದ್ದಾರೆ ಎಂದರೆ ಸರಿ . ನನ್ನ ತಂದೆಯ ಹೆಸರು ದೊಡ್ಡ ಗೋವಿಂದಯ್ಯ ಎಂದರೆ ಸರಿ , ನನ್ನ ತಂದೆ ಚಿಕ್ಕ ತಿಮ್ಮಯ್ಯ ರವರ ತಮ್ಮ ಎಂದರೆ ಸರಿ . ಮೇಲೆ ಹೇಳಿದ ವಿಭಾಗದಲ್ಲಿ ನನ್ನ ತಂದೆಯ ಭಾಗಕ್ಕೆ 20 ಗುಂಟೆ ಸ್ವತ್ತು ಬಂದಿದೆ ಎಂದರೆ ಸರಿಯಲ್ಲ . ಮೇಲೆ ಹೇಳಿದ ವಿಭಾಗದ ಪ್ರಕಾರ ವೆಂಕಟಯ್ಯ ರವರ ಮಕ್ಕಳು ಅವರ ಭಾಗಕ್ಕೆ ಬಂದಿರುವ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಮೇಲ್ಮನವಿ ಸಲ್ಲಿಸಿರುವ ಸ್ವತ್ತಿಗೂ ನಮಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. 5 ವರ್ಷಗಳ ಹಿಂದೆ ಓ ಎಸ್ ನಂ . 379/2015 ರ ದಾವೆ ಸಲ್ಲಿಸಿರುವ ವಿಚಾರ ನಮಗೆ ತಿಳಿಯಿತು . ಸದರಿ ದಾವೆಯ ವಿಚಾರ ತಿಳಿದ ನಂತರ ನಾವು ಓ ಎಸ್ ನಂ . 403/2021 ಎಂಬುದಾಗಿ ಮೇಲ್ಮನವಿಯ ದಾವೆಯ ಒಂದನೇ ಸ್ವತ್ತಿಗೆ ಸಂಬಂಧಿಸಿ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೆವು ಎಂದರೆ ಸರಿ . ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಂಡಿದೆ ಎಂದರೆ ಸರಿ .

ಸದರಿ ಆದೇಶದ ವಿರುದ್ಧ ಎಂ ಎ ನಂ. 8/2022 ಎಂಬುದಾಗಿ ಮೇಲ್ಮನವಿ ಸಲ್ಲಿಸಿದ್ದೆವು ಅದು ವಜಾ ಗೊಂಡಿದೆ ಎಂದರೆ ಸರಿ . ಆ ರೀತಿ ದಾವೆ ಮತ್ತು ಮೇಲ್ಮನವಿ ನಡೆದಿದ್ದರೂ ಸಹಾ ನಮಗೆ ಯಾವುದೇ ವಿಚಾರ ತಿಳಿದಿರಲಿಲ್ಲ ಎಂದು ಚಿಕ್ಕತಿಮ್ಮಯ್ಯ ರವರ ಸ್ವತ್ತಿಗೆ ಸಂಬಂಧಿಸಿ ಈ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸಾಕ್ಷಿಯು ವಿಚಾರ ತಿಳಿದಿರಲಿಲ್ಲ ಎಂಬುದಾಗಿ ಅಲ್ಲ , ಆದರೆ ನನ್ನ ತಂದೆಯ ಮರಣಾ ನಂತರ ಅವರು ದಾವೆ ಸಲ್ಲಿಸಿದ್ದರು ಆದುದರಿಂದ ಮೇಲ್ಮನವಿ ಸಲ್ಲಿಸಿದ್ದೇನೆ ಎಂದು ತಿಳಿಸಿದ್ದಾರೆ . ಚಿಕ್ಕತಿಮ್ಮಯ್ಯ ರವರ ಮಕ್ಕಳಿಗೆ ತೊಂದರೆ ನೀಡುವ ಸಲುವಾಗಿ ಈ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯ ಭಾಗಕ್ಕೆ ಬಂದಿರುವ ಸ್ವತ್ತು ನನ್ನ ಸ್ವಾಧೀನದಲ್ಲಿದೆ , ನಾನು ಮತ್ತು ನನ್ನ ಸಹೋದರಿಯರು ಅದನ್ನು ವಿಭಾಗಿಸಿಕೊಂಡಿಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .